JULY 25, 2026

**AKASHAVANI - DHARWAD**

**PRADESH SAMACHARA (KANNADA) 12.00 P.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ಇಂದು ದೇವ ಶಯನಿ ಆಷಾಢ** ಏಕಾದಶಿ. ಮಾಹಾರಾಷ್ಟ್ರ–ಕರ್ನಾಟಕದ ಗಡಿ, ಸೋಲಾಪುರ ಜಿಲ್ಲೆ, ಪಂಢರಪುರದ, ಕಾನಡಾರಾಜಾ, ಶ್ರೀ ವಿಠ್ಠಲ–ರುಕ್ಮಾಯಿ ಮಂದಿರದಲ್ಲಿ, ಇಂದು ಚಾತುರ್ಮಾಸ್ಯದ ವಿಶೇಷ ಪೂಜೆ, ಉತ್ಸವಕ್ಕೆ, ವಿಧ್ಯುಕ್ತ ಚಾಲನೆ ದೊರೆತಿದೆ. ಸಂತ ಜ್ಞಾನೇಶ್ವರ, ಸಂತ ತುಕಾರಾಮರ ಪಾದುಕೆಗಳು, ತುಳಸಿಕಟ್ಟೆಯನ್ನು ಹೊತ್ತ, ಲಕ್ಷಾಂತರ ವಾರಕರಿ ಸಂತರು, ದಿಂಡಿಗಳೊಂದಿಗೆ, ಪಾದಯಾತ್ರೆ ಮೂಲಕ, ಪಂಢರಪುರ ತಲುಪಿದ್ದಾರೆ. ಚಂದ್ರಭಾಗಾ ನದಿಯಲ್ಲಿ ಮಿಂದು, ಶ್ರೀ ಪಾಂಡುರಂಗ–ರುಕ್ಮಿಣಿ ದರ್ಶನ ಪಡೆಯುತ್ತಿದ್ದಾರೆ.

<><><>

**ಧಾರವಾಡದ, ಜ್ಞಾನೇಶ್ವರ ನಗರದ,** ಶ್ರೀ ಕಾನಡಾ ವಿಠ್ಠಲ–ರುಕ್ಮಿಣಿ ಮಂದಿರದ ಅಧ್ಯಕ್ಷ ಮಾರುತಿರಾವ ಭಿಸೆ, ಮಂದಿರದಲ್ಲಿ ಆಯೋಜಿಸಿರುವ ಕಾರ್ಯಕ್ರಮದ ಕುರಿತು, ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ್ದಾರೆ.

<><><>

**ಮಾರುತಿರಾವ ಭಿಸೆ ಧ್ವನಿ 25 ಸೆಕೆಂದುಗಳು**

<><><>

**ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ,** ಇಂದು ಮಧ್ಯಾಹ್ನ 12:30ಕ್ಕೆ ಚಿತ್ರದುರ್ಗದ ಶ್ರೀ ಮುರುಘರಾಜೇಂದ್ರ ಬೃಹನ್ಮಠದ ಅನುಭವ ಮಂಟಪದಲ್ಲಿ, ಬೆಂಗಳೂರು ಕಂದಾಯ ವಿಭಾಗದ, ವಿವಿಧ ಜಿಲ್ಲೆಗಳ ಅಭಿವೃದ್ಧಿ ಕಾಮಗಾರಿಗಳು ಹಾಗೂ ಅನುಷ್ಠಾನದ ಪ್ರಗತಿಯನ್ನು, ಅಧಿಕಾರಿಗಳೊಂದಿಗೆ, ಪರಿಶೀಲಿಸಲಿದ್ದಾರೆ.

<><><>

**ಕರ್ನಾಟಕ ಲೇಖಕಿಯರ ಸಂಘ ನೀಡುವ,** 2025 ಹಾಗೂ 26ನೇ ಸಾಲಿನ, ಡಾಕ್ಟರ್ ಅನುಪಮಾ ನಿರಂಜನ ಪ್ರಶಸ್ತಿಗೆ, ಲೇಖಕಿಯರಾದ, ಎ.ಪಿ. ಮಾಲತಿ ಹಾಗೂ ಎಂ.ಎಸ್. ವೇದಾ ಆಯ್ಕೆಯಾಗಿದ್ದಾರೆ. ಪ್ರಶಸ್ತಿ 10 ಸಾವಿರ ರೂಪಾಯಿ ನಗದು ಹಾಗೂ ಪ್ರಶಸ್ತಿ ಫಲಕವನ್ನು ಒಳಗೊಂಡಿದೆ ಎಂದು, ಸಂಘದ ಅಧ್ಯಕ್ಷೆ, ಡಾಕ್ಟರ್ ಆರ್. ಸುನಂದಮ್ಮ ತಿಳಿಸಿದ್ದಾರೆ.

<><><>

**ರಾಜ್ಯ ನ್ಯಾಯಾಂಗದ ಇತಿಹಾಸದಲ್ಲೇ,** ಪ್ರಥಮ ಬಾರಿಗೆ, ಆಗಸ್ಟ್ 1ನೇ ತಾರೀಖು, ಹೈಕೋರ್ಟ್ ಪೀಠದಲ್ಲಿ, ಮಹಿಳಾ ನ್ಯಾಯಮೂರ್ತಿಗಳೇ, ಎಲ್ಲ ಕಲಾಪಗಳನ್ನು ನಡೆಸಿಕೊಡಲಿದ್ದಾರೆ. **ಧಾರವಾಡ ಹೈಕೋರ್ಟ್ ಪೀಠದಲ್ಲಿ,** ಒಟ್ಟು 10 ಮಹಿಳಾ ನ್ಯಾಯಮೂರ್ತಿಗಳ ನೇತೃತ್ವದ ಪೀಠಗಳು, ಇಡೀ ದಿನದ ಕಲಾಪ ನಡೆಸಲಿವೆ. ಮುಖ್ಯ ನ್ಯಾಯಮೂರ್ತಿ ವಿಭು ಬಕ್ರು ಅವರ ಆದೇಶದಂತೆ, ಹೈಕೋರ್ಟ್ ರಿಜಿಸ್ಟ್ರಾರ್ ವಾಸುದೇವ ರೋಣ, ಅಧಿಸೂಚನೆ ಹೊರಡಿಸಿದ್ದಾರೆ.

<><><>

**ಕಾರ್ಗಿಲ್ ವಿಜಯೋತ್ಸವವನ್ನು,** ನಾಳೆ ದೇಶಾದ್ಯಂತ ಆಚರಿಸಲಾಗುತ್ತಿದೆ. ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ, 'ಕಾರ್ಗಿಲ್ ವಿಜಯ ದಿವಸ್' ಪ್ರಧಾನ ಕಾರ್ಯಕ್ರಮವನ್ನು, ಬೆಂಗಳೂರಿನ ರಾಷ್ಟ್ರೀಯ ಸೈನಿಕ ಸ್ಮಾರಕದಲ್ಲಿ, ನಾಳೆ ಬೆಳಗ್ಗೆ 8.45ಕ್ಕೆ ಆಯೋಜಿಸಿದೆ ಎಂದು, ವಿಶ್ರಾಂತ ಫ್ಲೈಟ್ ಲೆಫ್ಟಿನೆಂಟ್ ಎಂ.ಎಸ್. ಲೋಲಾಕ್ಷ, ತಿಳಿಸಿದ್ದಾರೆ.

**ಧಾರವಾಡದ ಕಾರ್ಗಿಲ್ ಸ್ತೂಪದಲ್ಲಿ,** ಕಾರ್ಗಿಲ್ ಸ್ಮಾರಕ ಸಮಿತಿ, ನಾಳೆ ಬೆಳಗ್ಗೆ 11 ಗಂಟೆಗೆ, ಹುತಾತ್ಮ ಯೋಧರಿಗೆ ಗೌರವ ನಮನ ಹಾಗೂ ಕಾರ್ಗಿಲ್ ವಿಜಯೋತ್ಸವ ಆಯೋಜಿಸಿದೆ ಎಂದು, ಸಮಿತಿಯ ಅಧ್ಯಕ್ಷ, ಚಂದ್ರಶೇಖರ ಅಮಿನಗಡ ತಿಳಿಸಿದ್ದಾರೆ.

<><><>

**ತುಂಗಭದ್ರಾ ಜಲಾಶಯದಲ್ಲಿ,** 80 ಟಿ.ಎಂ.ಸಿ. ಅಡಿಗೂ ಹೆಚ್ಚು ನೀರು ಸಂಗ್ರಹವಾಗುತ್ತಿತ್ತು; ಆದರೆ ಪ್ರಸ್ತುತ, ಕೇವಲ 28 ಟಿ.ಎಂ.ಸಿ. ಅಡಿ ನೀರು ಮಾತ್ರ ಲಭ್ಯವಿದ್ದು, ಕಾಲುವೆಗಳಿಗೆ ನೀರು ಬಿಡುಗಡೆಯಾಗದ ಕಾರಣ, ಬಳ್ಳಾರಿ ಜಿಲ್ಲೆಯ, ಸಿರುಗುಪ್ಪ, ಕಂಪ್ಲಿ ಮತ್ತು ಬಳ್ಳಾರಿ ಭಾಗದಲ್ಲಿ, ಭತ್ತದ ಬಿತ್ತನೆ ಸಾಧ್ಯವಾಗಿಲ್ಲ ಎಂದು, ಜಿಲ್ಲಾಧಿಕಾರಿ ಕೆ.ನಾಗೇಂದ್ರ ಪ್ರಸಾದ ತಿಳಿಸಿದ್ದಾರೆ.

<><><>

**ಕೋಲಾರ ನಗರಸಭೆಯ,** ಯರಗೋಳ ಅಣೆಕಟ್ಟೆ ವಿದ್ಯುತ್ ಪರಿವರ್ತಕ ಸುಟ್ಟ ಹಿನ್ನೆಲೆ, ಕುಡಿಯುವ ನೀರು ಪೂರೈಕೆಯಲ್ಲಿ, ಇಂದಿನಿಂದ 31 ರ ವರೆಗೆ, 7 ದಿನಗಳ ಕಾಲ ವ್ಯತ್ಯಯವಾಗಲಿದೆ ಎಂದು, ಪ್ರಕಟಣೆ ತಿಳಿಸಿದೆ.

<><><>

**ಆಕಾಶವಾಣಿಯ,** ಬಹುಶ್ರುತ, ಮನ್ ಕಿ ಬಾತ್ ನ, 136ನೇ ಆವೃತ್ತಿ, ನಾಳೆ ಭಾನುವಾರ ಬೆಳಗ್ಗೆ 11 ಗಂಟೆಗೆ, ಪ್ರಸಾರವಾಗಲಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ, ತಮ್ಮ ಮನದ ಮಾತುಗಳನ್ನು, ದೇಶ–ವಿದೇಶಗಳ ಭಾರತೀಯರೊಂದಿಗೆ, ಹಂಚಿಕೊಳ್ಳಲಿದ್ದಾರೆ. ಹಿಂದಿ ಅವತರಣಿಕೆ ಬಳಿಕ, ಕನ್ನಡ ಅನುವಾದ, ಮನದ ಮಾತು ಬಿತ್ತರಗೊಳ್ಳಲಿದೆ.

<><><>

**ಕೊಡಗು ಜಿಲ್ಲೆಯಲ್ಲಿ ಕಳೆದ ಜನೆವರಿಯಿಂದ ಇಲ್ಲಿಯ ವರೆಗೆ,** 144 ಹಾವು ಕಡಿತದ ಪ್ರಕರಣಗಳು ವರದಿಯಾಗಿವೆ. ಜಿಲ್ಲೆಯ ಎಲ್ಲ ಸರ್ಕಾರಿ ಆಸ್ಪತ್ರೆಗಳಲ್ಲಿ, ಆ್ಯಂಟಿ ವೆನಮ್ ದಾಸ್ತಾನು ಮಾಡಿಕೊಳ್ಳಲಾಗಿದೆ ಎಂದು, ಜಿಲ್ಲಾ ಆರೋಗ್ಯಾಧಿಕಾರಿ, ಡಾಕ್ಟರ್ ಸತೀಶ ತಿಳಿಸಿದ್ದಾರೆ.

<><><>

**ಮಾಜಿ ಸಚಿವ ಸಿ.ವೀರಣ್ಣ,** ನಿಧನರಾಗಿದ್ದಾರೆ. ಅವರಿಗೆ 89 ವರ್ಷ ವಯಸ್ಸಾಗಿತ್ತು. ತುಮಕೂರು ಜಿಲ್ಲೆ, ಕೊರಟಗೆರೆ ತಾಲೂಕು, ಬುಕ್ಕಪಟ್ಟಣದಲ್ಲಿ ಅಂತ್ಯಕ್ರಿಯೆ ನಡೆಯಲಿದೆ. ಉಪ ಮುಖ್ಯಮಂತ್ರಿ ಡಾಕ್ಟರ್ ಜಿ. ಪರಮೇಶ್ವರ ಸೇರಿದಂತೆ, ಗಣ್ಯರು ಕಂಬನಿ ಮಿಡಿದಿದ್ದಾರೆ.

<><><>

**ಮುಂಬರುವ, ಏಷ್ಯನ್ ಗೇಮ್ಸ್‌ಗೆ ಆಯ್ಕೆಯಾಗಿರುವ,** ಶಿವಮೊಗ್ಗ ಜಿಲ್ಲೆ, ಭದ್ರಾವತಿಯ, ಪೋಲ್‌ವಾಲ್ಟ್ ಅಥ್ಲೀಟ್ ಸಿಂಧುಶ್ರೀ ಅವರಿಗೆ, ಕ್ರೀಡಾ ಖಾತೆ ಸಚಿವ, ಡಾಕ್ಟರ್ ಜಿ. ಪರಮೇಶ್ವರ, ಮೂರು ಲಕ್ಷ ರೂಪಾಯಿ ಮೌಲ್ಯದ, ಅಂತಾರಾಷ್ಟ್ರೀಯ ಮಟ್ಟದ, ಮೂರು ಪೋಲ್‌ಗಳನ್ನು ವಿತರಿಸಿ, 5 ಲಕ್ಷ ರೂಪಾಯಿ ಪ್ರೋತ್ಸಾಹ ಧನ ನೀಡಿ, ಬೆಂಗಳೂರಿನಲ್ಲಿ, ಶುಭ ಹಾರೈಸಿದರು.

<><><>

**ಕೊಪ್ಪಳ ಜಿಲ್ಲೆಯಲ್ಲಿ,** 10 ಲಕ್ಷ 11 ಸಾವಿರದ 946 ಗಣತಿ ನಮೂನೆಗಳ ಗಣಕೀಕರಣ ಪೂರ್ಣಗೊಂಡಿದೆ ಎಂದು, ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ, ತಿಳಿಸಿದ್ದಾರೆ.

<><><>

**ಕೋಲಾರ ಜಿಲ್ಲೆಯಲ್ಲಿ, ಮತದಾರರ** ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಹಿನ್ನೆಲೆ, 5 ಸಾವಿರದ 943 ಮತದಾರರು, ತಮ್ಮ ಎನ್ಯುಮರೇಷನ್ ಅರ್ಜಿಗಳನ್ನು, ಆನ್‌ಲೈನ್ ಮೂಲಕ ಸಲ್ಲಿಸಿದ್ದಾರೆ ಎಂದು, ಜಿಲ್ಲಾಧಿಕಾರಿ ಡಾಕ್ಟರ್ ಎಂ.ಆರ್. ರವಿ ತಿಳಿಸಿದ್ದಾರೆ.

**<><><>**

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.**